# ಕಾಂಗ್ರೆಸ್ ಪಕ್ಷದ ವಿಷಯ ಪಲ್ಲಟ ಮಾಡುವತಂತ್ರ

ಅರುಣ್‌ಜೇಟ್ಲಿ
ರಾಜ್ಯ ಸಭಾ ವಿರೋಧ ಪಕ್ಷದ ನಾಯಕರು

ತನಗೆಎದುರಾದ ಸವಾಲುಗಳ ಅರಿವುಕಾಂಗ್ರೆಸ್ ಪಕ್ಷಕ್ಕೆಆದಂತಿಲ್ಲ. ಅರ್ಥವ್ಯವಸ್ಥೆಯಕಾಯಕಲ್ಪಕ್ಕಾಗಲಿ ಅಥವಾ ಭ್ರಷ್ಟಾಚಾರದ ಆರೋಪಗಳಿಂದ ತನ್ನನ್ನು ಮುಕ್ತಗೊಳಿಸುವುದಕ್ಕಾಗಲಿ ಅದರ ಬಳಿ ಉತ್ತರಗಳಿಲ್ಲ. ರಾಜಕೀಯವಾಗಿ ನರೇಂದ್ರ ಮೋದಿ ಅವರನ್ನು ನಿಭಾಯಿಸುವಯುಕ್ತಿಅದಕ್ಕಿಲ್ಲ. ತನ್ನ ಸಂಘಟನೆಯನ್ನು ಬಲಪಡಿಸುವ ಬದಲು ಮತ್ತುತನ್ನ ನಾಯಕರ ವರ್ಚಸ್ಸನ್ನು ವೃದ್ಧಿಸುವ ಮಾರ್ಗೋಪಾಯಗಳನ್ನು ಹುಡುಕುವ ಬದಲು, ಮೋದಿ ಅವರನ್ನು ಸಿಬಿಐ ಮೂಲಕ ಅಥವಾತನ್ನ ನಾಯಕರಅಸಂಬದ್ಧ ಟೀಕೆಗಳ ಮೂಲಕ ರಾಜಕೀಯವಾಗಿ ಮಟ್ಟ ಹಾಕಲು ಮುಂದಾಗಿದೆ. ಮೋದಿಯವರಗುಜರಾತ್ ಸರ್ಕಾರ ಪೋಲಿಸರ ಮೂಲಕ ಓರ್ವ ಮಹಿಳೆಯ ಚಲನವಲನಗಳ ಮೇಲೆ ನಿಗವಿಡಿಸಿತ್ತು ಎಂಬ ಆಪಾದನೆಯ ವಿಚಾರಣೆಯನ್ನುತನಿಖಾಆಯೋಗಕ್ಕೆ ವಹಿಸುವ ನಿರ್ಧಾರವನ್ನುಕೇಂದ್ರ ಸರ್ಕಾರತೆಗೆದುಕೊಂಡಿದೆ ಎಂಬ ಗೃಹ ಸಚಿವ ಶ್ರೀ ಸುಶೀಲ್ ಕುಮಾರ್ ಶಿಂದೆ ಅವರ ಹೇಳಿಕೆಯಿಂದ ತಿಳಿದು ಬರುವಅಂಶವೆಂದರೆ, ಕಾಂಗ್ರೆಸ್ ಪಾರ್ಟಿ ಈಗಲೂ ತನ್ನಚುನಾವಣಾ ವೈಫಲ್ಯದಿಂದ ಪಾಠಕಲಿತಿಲ್ಲ.

2ಜಿ ತರಂಗಾಂತರ ಹಂಚಿಕೆಯಲ್ಲಿ ವ್ಯಾಪಕ ಹಗರಣ ನಡೆದಿದೆ.ಜಂಟಿ ಸಂಸದೀಯ ಸಮಿತಿಯ ಮರೆಮಾಚುವ ವರದಿಯು ಪ್ರಕರಣಕ್ಕೆಅಂತ್ಯ ಹಾಡಿದೆ ಎಂಬ ನಂಬಿಕೆ ಕಾಂಗ್ರೆಸ್ ಪಕ್ಷದ್ದಾಗಿದೆ. ವಿಪಕ್ಷದ ಸಂಸದರು ಸಲ್ಲಿಸಿದ ವಿರೋಧದ ಟಿಪ್ಪಣಿಗಳಿಗೆ ಕವಡೆ ಕಾಸಿನ ಕಿಮ್ಮತ್ತು ನೀಡಲಾಗಲಿಲ್ಲ. ಆದರ್ಶ ಹಗರಣದಲ್ಲಿ ಸಾರ್ವಜನಿಕ ಆಸ್ತಿಯನ್ನು ಖಾಸಗಿ ವ್ಯಕ್ತಿಗಳು ಲೂಟಿ ಮಾಡಿದರು.ಮಹಾರಾಷ್ಟ್ರದ ಅಂದಿನ ಮುಖ್ಯಮಂತ್ರಿಅಶೋಕ್‌ಚೌಹಾಣ್‌ಅವರು ಈ ಹಗರಣದಿಂದಾಗಿರಾಜಿನಾಮೆ ನೀಡಬೇಕಾಯಿತು.ಇಂದು, ಅಶೋಕ ಚೌಹಾಣ್‌ಅವರ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳಲು ಸರ್ಕಾರತನ್ನಒಪ್ಪಿಗೆ ನಿರಾಕರಿಸಿದೆ ಹಾಗೂ ಆದರ್ಶ್ ಹಗರಣದತನಿಖಾ ವರದಿಯನ್ನು ಸಂಪುಟ ಸಭೆ ತಿರಸ್ಕರಿಸಿದೆ.ಇದರಿಂದ ಹಗರಣದ ಮೇಲೆ ತೆರೆಯೆಳೆಯಲಾಗಿದೆ ಎಂಬ ನಂಬಿಕೆ ಕಾಂಗ್ರೆಸ್ ಪಕ್ಷ ಹೊಂದಿದೆ.
ಗುಜರಾತ್ ಪೋಲಿಸರುಓರ್ವ ಮಹಿಳೆಯ ಚಲನವಲನಗಳ ಮೇಲೆ ಅಕ್ರಮವಾಗಿ ನಿಗವಿಟ್ಟಿದ್ದರು ಎಂಬ ವಿಚಾರಕ್ಕೆಕಾಂಗ್ರೆಸ್ ಪಾರ್ಟಿ ಪ್ರಚಾರ ನೀಡುತ್ತಿದೆ.ಆ ಮಹಿಳೆಯ ಸುರಕ್ಷತೆಗಾಗಿ ಭದ್ರತೆಯನ್ನುಕೋರಲಾಗಿತ್ತುಎಂದು ಆ ಮಹಿಳೆಯ ಕುಟುಂಬದವರೇ ಸ್ಪಷ್ಟ ಪಡಿಸಿದ್ದಾರೆ.ಈ ಸ್ಪಷ್ಟನೆಯ ಹೊರತಾಗಿಯೂ, ಗುಜರಾತ್ ಸರ್ಕಾರತನಿಖಾಆಯೋಗವನ್ನು ನಿವೃತ್ತ ನ್ಯಾಯಾಧೀಶರಅಧ್ಯಕ್ಷತೆಯಲ್ಲಿ

ನೇಮಿಸಿದೆ.ಆಯೋಗ ಈ ವಿಚಾರದತನಿಖೆ ಆರಂಭಿಸಿದೆ.ಅರ್ಥವ್ಯವಸ್ಥೆಯ ಸಮಸ್ಯೆಗಳು ಮತ್ತು ಭ್ರಷ್ಟಾಚಾರದ ಆರೋಪಗಳನ್ನು ಬಗೆಹರಿಸಿಕೊಳ್ಳುವ ಬದಲು, ಇದೇ ವಿಚಾರದತನಿಖೆಗೆಕೇಂದ್ರ ಸರ್ಕಾರ ವಿಚಾರಣಾಆಯೋಗ ನೇಮಿಸಲಿದೆ ಎಂಬ ಗೃಹ ಸಚಿವರ ಹೇಳಿಕೆ ಕೇಳಿ ಬಂದಿರುವುದುಆಶ್ಚರ್ಯ ಮೂಡಿಸಿದೆ.ಈ ವಿಚಾರದತನಿಖೆಗೆಕೇಂದ್ರ ಸರ್ಕಾರಆಯೋಗ ನೇಮಿಸಿರುವ ವಿಚಾರ ಸಂವೈಧಾನಿಕ ನಿಯಮಗಳ ಉಲ್ಲಂಘನೆಆಗಿರುವಜೊತೆಗೆಕಾಂಗ್ರೆಸ್ ಪಾರ್ಟಿದೇಶದ ಸಮಸ್ಯೆಗಳ ನಿವಾರಣೆಗೆ ಬದ್ಧವಾಗಿಲ್ಲ ಎಂಬ ಸತ್ಯಕ್ಕೆ ಮತ್ತೊಮ್ಮೆ ಪುಷ್ಠಿದೊರೆತಿದೆ.ಯಃಕಶ್ಚಿತ್ ಶತೃತ್ವದರಾಜಕಾರಣವೊಂದೇಅದಕ್ಕೆಗೊತ್ತಿರುವಕಾರ್ಯತಂತ್ರ.

2ಜಿ ಹಂಚಿಕೆ ಹಗರಣವನ್ನು ಜೆಪಿಸಿ ಮರೆಮಾಚಿದ ನಂತರಅದರ ಸಂಪೂರ್ಣ ಸತ್ಯ ಹೊರಬರಲುತನಿಖಾಆಯೋಗ ನೇಮಿಸುವ ಅಗತ್ಯದೇಶಕ್ಕಿದೆ.ಆದರ್ಶ್ ಹಗರಣದತನಿಖೆ ನಡೆಸಿದ ಸಮಿತಿಯ ವರದಿಯನ್ನುಜಾರಿಗೆತರುವ ಹಾಗೂ ತಪ್ಪಿತಸ್ಥರನ್ನುದಂಡಿಸುವಅಗತ್ಯವಿದೆ.ಕಾಂಗ್ರೆಸ್ ಪಾರ್ಟಿಯ ಮೊದಲ ಕುಟುಂಬದ ಪ್ರಮುಖ ಸದಸ್ಯರೊಬ್ಬರು ಭೂ ಕಬಳಿಕೆ ಹಗರಣದಲ್ಲಿ ಭಾಗಿಯಾಗಿದ್ದಾರೆ ಎಂಬ ಆರೋಪದತನಿಖೆಯನ್ನುರಾಜಸ್ಥಾನ ಮತ್ತು ಹರಿಯಾಣರಾಜ್ಯ ಸರ್ಕಾರಗಳು ಆರಂಭಿಸಬೇಕಿದೆ.ಈ ಎಲ್ಲಾ ಪ್ರಕರಣಗಳಲ್ಲೂ ಭ್ರಷ್ಟಾಚಾರದ ಆರೋಪಗಳಿಂದ ತನ್ನನ್ನು ಮುಕ್ತಗೊಳಿಸಿಕೊಳ್ಳುವ ಬದಲು, ಪ್ರಮುಖ ವಿಚಾರಗಳನ್ನು ಸಾರ್ವಜನಿಕ ಸ್ಮೃತಿ ಪಟಲದಿಂದ ಬೇರೆಡೆಗೆ ಸೆಳೆಯುವ ಮೂಲಕ ರಾಜಕೀಯ ಲಾಭ ಗಳಿಸಬಹುದೆಂಬ ನಂಬಿಕೆ ಕಾಂಗ್ರೆಸ್ ಪಕ್ಷದ್ದಾಗಿದೆ.ಇಂತಹ ಕುಕೃತ್ಯಗಳಿಂದ ಸುಕೃತ್ಯ ಸಾಧ್ಯವಾಗದು.